ಸಾಕ್ಷಿಯನ್ನು ದಿನಾಂಕಃ 03/07/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- ಎದುರುದಾರ ಪರ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಎದುರುದಾರ ನಂ.2 ಇರುತ್ತೇನೆ. ನಾನು ಇಂದು ಮುಖ್ಯ ವಿಚಾರಣೆಯ ಹೇಳಿಕೆಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಲ್ಲಿದ್ದೇನೆ, ಸದರಿ ಪ್ರಮಾಣ ಪತ್ರದಲ್ಲಿ ಇರುವಂತಹ ಮಾಹಿತಿಗಳು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದ್ದು ಅದರಲ್ಲಿ ಬರೆದಂತಹ ಎಲ್ಲ ಮಾಹಿತಿಗಳು ನಿಜವಿರುತ್ತದೆ ಎಂದು ತಿಳಿದು ನಾನು ನನ್ನ ಸಹಿ ಮಾಡಿರುತ್ತೇನೆ.

**<u>ನಾನು ಇಂದು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ</u>**

Authorization letter ನ್ನು ನಿಆರ್ 10 ಎಂದು, ಪಾಲಿಸಿಯನ್ನು ನಿ ಆರ್ 11 ಎಂದು ಗುರುತಿಸಲಾಯಿತು.

**ಮುಂದಿನ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳಿರುತ್ತಾರೆ.**

**ಪಾಟೀ ಸವಾಲುಃ- 1 ನೇ ಎದುರುದಾರ ಪರ ವಕೀಲರಿಂದಃ**

ಈ ಪ್ರಕರಣದಲ್ಲಿರುವ ವಾಹನದ ನಂ. ಕೆಎ 63 – 3759. ಸಾಕ್ಷಿಗೆ ಅಶೋಕ ಗುಡಸಲಮನಿ ಇವರ ಚಾಲನಾ ಪರವಾನಿಗೆ ಪತ್ರ ಸಾಕ್ಷಿಗೆ ತೋರಿಸಲಾಗಿ ಹೌದು ಎಂದು ಒಪ್ಪಿ ಅದು ಅಪಘಾತ ಸಮಯದಲ್ಲಿ ಚಾಲನೆಯಲ್ಲಿ ಇತ್ತು ಎಂದರೆ ಸರಿ. ಅದು ಈಗಾಗಲೇ ನಿ ಆರ್ 8 ಎಂದು ಗುರುತಿಸಿದೆ. ಯಾವುದೇ ನೌಕರ ಮದ್ಯಪಾನ ಮಾಡಿ ತೀರಿಕೊಂಡರೆ ಅದು ಪಾಲಿಸಿ ನಿಯಮಗಳ ಉಲ್ಲಂಘನೆಯಾಗುತ್ತದೆ ಎಂದರೆ ಸರಿ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಪಾಟೀ ಸವಾಲುಃ- ಅರ್ಜಿದಾರ ಪರ ವಕೀಲರಿಂದಃ**

ಅಪಘಾತದ ಸಮಯದಲ್ಲಿ ಲಾರಿಗೆ ವಿಮೆ ಚಾಲ್ತಿಯಲ್ಲಿತ್ತು. ಈ ಪ್ರಕರಣದಲ್ಲಿ ನಿಂತಲಾರಿಯ ಪಕ್ಕದಲ್ಲಿ ಚಾಲಕ ಮಲಗಿಕೊಂಡಿದ್ದರು ಆಗ ತೀರಿಕೊಂಡಿದ್ದಾರೆ ಎಂದು ಪ್ರ.ವ.ವ. ಮತ್ತು ಚಾರ್ಜಶೀಟ್ ಹಾಕಿದ್ದಾರೆ ಎಂದರೆ ಸರಿ ಎಂದು ಹೇಳಿ ಸಾಕ್ಷಿ ಮುಂದುವರೆದು ಅರ್ಜಿದಾರರ ಹೇಳಿಕೆಯಂತೆ ಬರೆದಿದ್ದಾರೆ ಎಂದು ಹೇಳುತ್ತಾರೆ.

ಸಾಮಾನ್ಯವಾಗಿ Workman Compensation Act ಪ್ರಕಾರ ಅಪಘಾತ ಆದಾಗ ಲಾರಿಯ ಮಾಲೀಕರಿಂದ claim form ಎಂದು ತೆಗೆದುಕೊಳ್ಳುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಈ ಪ್ರಕರಣದಲ್ಲಿ ಮಾಲೀಕರೆಂದು claim form ಪಡೆದುಕೊಂಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ಪ್ರಕರಣದಲ್ಲಿ ಬಸವರಾಜ ಊರ್ಫ ಬಸಪ್ಪ ತಮ್ಮ ಕೆಲಸದ ವೇಳೆಯಲ್ಲಿ ತೀರಿಕೊಂಡಿದ್ದರಿಂದ ನಿಮ್ಮ ವಿಮಾ ಕಂಪನಿಯವರು ಪರಿಹಾರ ಕೊಡಲು ಭಾದ್ಯಸ್ಥರಾಗಿದ್ದೀರಿ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ**

**ನ್ಯಾಯಾಲಯದ ಪ್ರಶ್ನೆಗಳುಃ-**

ನಮ್ಮ ಕಂಪನಿ ಕಡೆಯಿಂದ ಈ ಪ್ರಕರಣ ದಾಖಲಾದ ನಂತರ ಪೊಲೀಸ ದಾಖಲಾತಿಗಳನ್ನು ಪಡೆದುಕೊಂಡು ತನಿಖೆ ಮಾಡಿದ್ದೇವೆ. ಈ ಪ್ರಕರಣದಲ್ಲಿ claim form ತುಂಬಿ ಕೊಟ್ಟಿದ್ದಾರಾ ಎಂದರೆ ಸಾಕ್ಷಿ ನನ್ನ ದಾಖಲಾತಿಯಲ್ಲಿ ಇಲ್ಲ ಎಂದು ಹೇಳುತಾರೆ.

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
03.07.2025
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**